

ಚಿತ್ರ: ಸಂಜೀವ ಅಕ್ಕಿ

ಅಪ್ಪಗೊಳು ಸಜ್ಜಕಾ ಹಾಕಿದ್ರು. ಹಿಂದಿಂದ ಹಾಲು, ತುಪ್ಪ ಬಂದೂವು. ಉಂಡು ಕೈ ಮುಗುದು ಮನಿಗೆ ಬಂದು ನಮ್ಮ ಪೇಚಾಟ ಹೇಳಿದ್ರ, ಎಲ್ಲಾರೂ, 'ಅದೇನ್ ಪುಣ್ಯಾ ಮಾಡಿರೀ ನೀವಿಬ್ರು, ಅದೇನ್ ಪುಣ್ಯಾ ಮಾಡಿರೀ. ಪುಣ್ಯವಂತ್ರು' ಅಂದಾಗನು ನಮ್ಮ ಪುಣ್ಯ ಸಂಪಾದನೆಯ ಅರುವು ನಮಗ ಆಗಿದ್ದು.

ಇನ್ನೊಮ್ಮೆ ಬಿಜಾಪುರಕ್ಕ ಹೋದಾಗ, ಅವರ ಪ್ರವಚನಾ ಕೇಳಾಕಂತನ ನಾನು, ನನ್ನ ದೊಡ್ಡ ತಂಗಿ ಡಾ. ಶಕುಂತಲಾ ಇಬ್ರು, ನಸೀಕಿನ್ಯಾಗ ಎದ್ದು, ಜಳಕಾ ಮಾಡಿ, ಇಬತ್ತಿ ಹಚಗೊಂಡು ಆಶ್ರಮಕ್ಕ ಹೋಗಿ ಜಾಗಾ ಹುಡಕ್ಕೊಂಡು ಕುಂತ್ವಿ. ಅವರ ಮಾತ್ ಕೇಳ್ತಿದ್ರ, ಸೇಮ್ ಮಾತಗೊಳು, ನಮ್ಮಿಬ್ರಿಗೂ ನಮ್ಮ ನಮ್ಮ ತ್ರಾಸಿಗೆ ಪ್ರತ್ಯೇಕ ಔಷಧಗತೆ ಕೆಲಸಾ ಮಾಡಿದ್ದು, ಯಾವತ್ತೂ ಮರಿಯಾಕ ಆಗದಂಥಾ ಅನುಭೂತಿ. ಇಡೀ ಜನ್ಮ ಹೋದಲ್ಲೆಲ್ಲಾ ಜ್ಞಾನದ ಬೆಳಕನ್ನ ಉಣಸಕೋತ, ಹೆಜ್ಜಿ ಹೆಜ್ಜಿಗೂ ತಮ್ಮನ್ನ ತಾವು ಗೆಲ್ಲಕೋತ ಹೋದ ಮಾಹಾತ್ಮ ನಮ್ಮ ಸಿದ್ದೇಶ್ವರ ಅಪ್ಪಾರು. 2018ರಾಗ ಸರಕಾರ ಅಪ್ಪಗೊಳಿಗೆ ಪದ್ಮಶ್ರೀ ಪ್ರಶಸ್ತಿ ಘೋಷಿಸಿದ್ರ, 'ಎಲ್ಲಾ ಬ್ಯಾಡಂತ ಹೊಂಟ ಸನ್ಯಾಸಿಗ್ಯಾಕ್ರಿ ಇದೆಲ್ಲಾ? ಬ್ಯಾಡ ನನಗಿದು' ಅಂತಂದು ವಿನಯದಿಂದನ ನಿರಾಕರಿಸಿದ ಸ್ಥಿತಪ್ರಜ್ಞರು ಅವರು. ಇನ್ನಷ್ಟು ಕಾಲ ಅವ್ರು ಇರಬೇಕಿತ್ತು. ಅಂಥವರಿದ್ದ ಕಾಲಮಾನದಾಗ ನಾವೂ ಅದೀವಿ, ಅವ್ರನ್ನ ಕಂಡೀವಿ, ಕೇಳೀವಿ ಅನ್ನೂದ ಒಂದು, ಧನ್ಯ ಅನಸೂ ಮಾತು.

ಹಾಂ, ನಾ ಸಾಹಿತ್ಯ ಸಮಾರಂಭದ ಬಗ್ಗೆ ಮಾತಾಡಾಕತ್ತಿದ್ದೆ ಅಲಾ? ಅವತ್ತ ಆ ಸಭಾದ್ದ ವೇದಿಕಿ ಮ್ಯಾಲೆ ನನ್ನ ಬಾಜು, ಭಾಳ ಠೀಕ್ ಠಾಕ್ ಇದ್ದ ಒಬ್ರು ಕುಂತಿದ್ದು, ಬಿಳಿ ಪ್ಯಾಂಟ್ ಶರ್ಟ್ ಹಾಕ್ಕೊಂಡು. ನೋಡಿದ್ರ ಅವ್ರು ಒಂದೋ ರಾಜಕಾರಣಿ ಇರ್ಬೇಕು ಇಲ್ಲಾ ದೊಡ್ಡ ವ್ಯಾಪಾರಸ್ಥರು ಇರ್ಬೇಕು ಅನ್ಕೊಂಡೆ. ಅವ್ರು ತಮ್ಮ ಪರಿಚಯ ಮಾಡ್ಕೋತ, 'ನಾ ಒಬ್ಬ ರೈತ ರೀ. ಬಿಜಿನೆಸ್ಸೂ ಐತಿ. ಆದ್ರ ನಾ ಡ್ರ್ಯಾಗನ್ ಫ್ರೂಟ್ ಬೆಳೆಯೊದ್ರಾಗ ಏಷಿಯಾಕ್ಕs ಎರಡನೇ ನಂಬರ್ರೀ, ಇಲ್ಲೇ ನಾಗಠಾಣದಾಗ ನಮ್ಮ ತ್ವಾಟ ಐತ್ರಿ' ಅಂದ್ರಾತು! ದಂಗ್ ಬಡ್ದುಹೋತ್ ನನಗ. ಅಮೇರಿಕಾದಿಂದ ನಿನ್ನೆ ಮನ್ನೆ ಭಾರತಕ್ಕ ಕಾಲಿಟ್ಟ ಈ ಹಣ್ಣು, ಅಗಳೇ ನಮ್ಮಲ್ಲೂ, ಅದೂ ನಮ್ಮ ಜಿಲ್ಲಾದಾಗ ಈ ಲೆಕ್ಕಕ್ಕ ಬೆಳಿಯೂವಂಗಾತ?! ಅಂತ ಒಂದಾದ್ರ, ರೈತರೂ ಈ ನಮೂನಿ ಶಿಸ್ತು ಇರ್ತಾರಲ್ಲಾ ಅನ್ನೂದು ಇನ್ನೊಂದು. ಗುಲಾಬಿ ಬಣ್ಣದ ಒಡಲು, ಅದರಾಗ ಅಲ್ಲಲ್ಲಿ ತೆಳ್ಳಗ ಹಸರು ಬಣ್ಣದ ಲೇಸ್ ಹಚ್ಚಿದ ಸೀರಿ ಊಟಗೊಂಡಂಗ, ಕಣ್ಣಿಗೆ ಭಾಳ ಚಂದ ಕಾಣ್ಸು ಕಳ್ಳಿ (ಕ್ಯಾಕ್ಟಸ್) ಜಾತಿಗೆ ಸೇರಿದ ಈ ಹಣ್ಣೊಳಗ ಚೊಲೋ ಚೊಲೋ ಪೌಷ್ಟಿಕಾಂಶ ಅದಾವಂತ. ಇವು ಸೈಜಿನ್ಯಾಗ ಸುಲಿದ ತೆಂಗಿನಕಾಯಿಯಷ್ಟು ದೊಡ್ಡುವಾದ್ರೂ, ಜಡಿ ತುದಿಗೆ ಕಟ್ಟಿದ ಕೆಂಪು ರಿಬ್ಬನ್ನಿನಂಗ ಬಳ್ಳಿ ತುದಿಗೆ ಬೆಳಿತಾವ. ಒಂದೊಂದ್ ಕಂಬಕ್ಕೂ ಮೂರು ನಾಕು ಬಳ್ಳೀನ, ಎತ್ತಿ ಜುಟ್ಟಾ ಕಟ್ಟಿದಂಗ ಕಟ್ಟಿ ಬಿಡ್ತಾರ. ಹೊತ್ತು ಹೊತ್ತಿಗೆ ನೀರ ನಿಡಿ ಆತಪಾ ಅಂದ್ರ ತುದಿಗೊಂದೊಂದು ಹಣ್ಣು. ನೋಡಾಕ್ ಎಷ್ಟ್ ಚಂದ ಅಂತೀರಿ!

ಡ್ರ್ಯಾಗನ್ನೂ ನಮ್ಮಲ್ಲಿ ಬೆಳಿಯಾಕತ್ತಾರ ಅಂತ ತಿಳಿದ ಮ್ಯಾಲೆ, ನಮ್ಮಕಡೆ ಮಂದಿ ಎಲ್ಲಾನೂರ್ ನಮ್ಮೋರು ಅಂತ ಯಾಕ ಹಚಗೋತಾರ ಅಂತ ಗೊತ್ತಾತು. ನಮ್ಮ ನೆಲದ ಗುಣಾ ಅದು! ಎಲ್ಲಿ ಅಮೇರಿಕಾ, ಮಿಡಲ್ ಈಸ್ಟ್ ಮತ್ತ ಏಷಿಯಾದ ಕೆಲುವು ದೇಶಗೊಳ್ ಹವಾಮಾನ, ಎಲ್ಲಿ ನಮ್ಮ ಜಿಲ್ಲಾದ್ದ ಹವಾಮಾನ! ಇಂಥಾ ನೆಲದ ಅನ್ನಾ ಉಂಡು, ಇಲ್ಲಿ ನೀರು ಕುಡದ ಮಂದಿಗೆ ಆ ಗುಣ ಬರ್ದೇ ಇದ್ದೀತ?!

ದ್ರಾಕ್ಷಿ ಮೂಲ ಮಿಡಲ್ ಈಸ್ಟಿನದಂತ, ಅದು ನಮ್ಮದಾಗಿ ಅಗಳೇ ಎರಡ್ನೂರ್ ವರ್ಷಾದ್ವು. ಇನ್ನ ದಾಳಂಬ್ರಿ (ದಾಳಿಂಬೆ) ಪರ್ಷಿಯಾದ್ದಂತ. ಮತ್ತ ನಿಂಬಿಹಣ್ಣು, ಬಾಳಿಹಣ್ಣು, ಮಾವಿನಹಣ್ಣು, ವಿಳ್ಯದ್ ಎಲಿ ಇವೆಲ್ಲಾ ಏಷಿಯಾದ ಬ್ಯಾರೆ ಬ್ಯಾರೆ ಕಡೆನೂ ಬೆಳಿಯೊ ಬೆಳಿಗೊಳು. ಕಬ್ಬಂತೂ ಸೈಯೇ ಸೈ ಪಕ್ಕಾ ನಮ್ಮ ನೆಲದ್ದು. ■



ಸಿದ್ದೇಶ್ವರ ಸ್ವಾಮೀಜಿ